**ಸಿವಿಲ್ ನ್ಯಾಯಾಧೀಶರ ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ ಔರಾದ(ಬಿ)**
ಸಿ.ಸಿ. **ನಂ.334/2017**

**ಚಾಸಾ–16 ಪ್ರಾಸಾ–14**

ದಿನಾಂಕ 04–03–2026 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

| | |
|---|---|
| ಹೆಸರು | ಃ ಗೋಪಾಳರಾವ |
| ತಂದೆಯ ಹೆಸರು | ಃ ಮೋಹನರಾವ |
| ವಯಸ್ಸು | ಃ 78 ವರ್ಷ |
| ಉದ್ಯೋಗ | ಃ ಒಕ್ಕಲುತನ |
| ವಾಸ ಸ್ಥಳ | ಃ ದಾಬಕಾ–ಸಿ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ–**

1. ಚಾಸಾ–1, 4, 5, 6, 8 ರಿಂದ 15, 17 ಮತ್ತು 18 ರವರ ಪರಿಚಯ ಇರುತ್ತದೆ. 1 ರಿಂದ 4 ನೇ ಆರೋಪಿತರು ನನಗೆ ಗೊತ್ತು. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರು ನನ್ನನು ವಿಚಾರಣೆ ಮಾಡಿಲ್ಲ ಮತ್ತು ಯಾವುದೇ ಹೇಳಿಕೆ ಪಡೆದುಕೊಂಡಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಗೆ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಬೇಕು ಎಂದು ಕೇಳಿಕೊಂಡಿದ್ದರಿಂದ ಅನುಮತಿಸಲಾಗಿದೆ.)

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ–**

1. ನಾನು ದಾಬಕಾ–ಸಿ ಗ್ರಾಮದ ನಿವಾಸಿ ಎಂದರೆ ಸರಿ. ದಾಬಕಾ ಗ್ರಾಮದ ಶಿವಾರದಲ್ಲಿ ವಿಜಯಕುಮಾರ ಪಾಟೀಲ ರವರ ಹೆಂಡತಿ ಮೀನಾ ಇವರ ಹೆಸರಿಗೆ ಹೊಲ ಸ.ನಂ.14 ರಲ್ಲಿ 2 ಎಕರೆ 2 ಗುಂಟೆ ಜಮೀನು ಇರುತ್ತದೆ, ಈ ಜಮೀನಿಗೆ ಹತ್ತಿ ನಾಲಾ ಇರುತ್ತದೆ, ವಿಜಯಕುಮಾರ ಇವರು ನಾಲಾದಲ್ಲಿ ಬಾವಿಯಿಂದ ನೀರು ತಮ್ಮ ಹೊಲಕ್ಕೆ ಬೆಳೆಗಳಿಗೆ ತೆಗೆದುಕೊಳ್ಳುತ್ತಾರೆ ಎಂದರೆ ಸರಿ.

2. ಗ್ರಾಮ ಪಂಚಾಯತ್ ರವರು 2012 ನೇ ಸಾಲಿನಲ್ಲಿ ಮೀನಾ ಗಂಡ ವಿಜಯಕುಮಾರ ರವರ ಹೊಲದಲ್ಲಿ ಬಾವಿ ತೆಗೆಸುತ್ತೇವೆ ಅಂತಾ ಹೇಳಿ 2011–12 ನೇ ಸಾಲಿನ ಎಮ್. ಜಿ .ಎನ್. ಆರ್. ಇ. ಜಿ. ಯಲ್ಲಿ ದಾಬಾಕಾ–ಸಿ ಗ್ರಾಮ ಪಂಚಾಯತ ವ್ಯಾಪ್ತಿಯ ಮೀನಾ ಗಂಡ ವಿಜಯಕುಮಾರ ಸ.ನಂ.14 ರಲ್ಲಿ

ಜಮೀನಿನ ದಂಡೆಗೆ ಹತ್ತಿ ನಾಲಾದಲ್ಲಿ ತೆರೆದ ಬಾವಿ ತೆಗೆಯಿಸಿದ್ದು ಅಂದಾಜು ರೂ.1,21,910/– ಸರಿಯಾಗಿ ಕಾಮಾಗಾರಿ ಮಾಡದೇ ನಾಲಾದಲ್ಲಿ ತಗ್ಗು ತೆಗೆಯಿಸಿ (1) ಶ್ರೀಮತಿ, ಜ್ಞಾನಾಬಾಯಿ ಗಂಡ ನಾಮದೇವ ಶಿಂಧೆ, ಸಾ. ದಾಬಕಾ–ಸಿ, ಮಾಜಿ ಅಧ್ಯಕ್ಷರು ಗ್ರಾ.ಪಂ.ದಾಬಕಾ–ಸಿ, (2) ವೈಜಿನಾಥ ತಂದೆ ಮಾರುತೇಪ್ಪಾ ಪಾಟೀಲ, ಪಿಡಿಓ ದಾಬಕಾ – ಸಿ ಪಂಚಾಯತ, (3) ದೇವಾನಂದ ತಂದೆ ಶೇಷೆರಾವ ದೇಶಮುಖ, ಜೆ.ಇ. ತಾ.ಪಂ.ಔರಾದ–ಬಿ, (4) ಅಶೋಕ ತಂದೆ ಪಂಡಿತರಾವ ಕಾಳಗಿ, ಎಇಇ, ಜಿ.ಪಂ.ವಿಭಾಗ ಔರಾದ–ಬಿ ಇವರು ಫಿರ್ಯಾದಿಗೆ ಮತ್ತು ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ.

3. ದಿನಾಂಕ 29–11–2016 ರಂದು ಈ ಎಲ್ಲಾ ವಿಚಾರಗಳನ್ನು ಹೇಳಿ ಈಗ ನನಗೆ . . . . ರಂತೆ ಓದಿ ಹೇಳಿದ ಹಾಗೆ ಪೋಲಿಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಒಪ್ಪಲಾರದ ಸಾಕ್ಷಿಯ ಹೇಳಿಕೆಯನ್ನು ನಿಪಿ–16 ಎಂದು ಗುರುತಿಸಲಾಯಿತು.

**ಪಾಟೀ ಸವಾಲು 1 ನೇ ಆರೋಪಿತನ ಪರ ಶ್ರೀ.ಆರ್. ಎ. ಎನ್ ವಕೀಲರಿಂದ:**

1 ನೇ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

**ಪಾಟೀ ಸವಾಲು: 2 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ. ಬಿ. ಸಿ. ಕೆ. ವಕೀಲರಿಂದಃ–**

1. ಸ.ನಂ.14 ರ ಜಮೀನಿಗೆ ಹತ್ತಿಕೊಂಡು ಇರುವ ನಾಲಾ ಅದು ವಿಜಯಕುಮಾರ ಪಾಟೀಲ ರವರ ಸ್ವಂತ ಆಸ್ತಿ ಆಗಿದ್ದು ಅದು ಸ.ನಂ.14 ರಲ್ಲಿ ಬರುತ್ತದೆ ಎಂದರೆ ಸರಿ. ಸದರಿ ನಾಲೆಯ ಎರಡು ಕಡೆಗೆ ಮೀನಾ ವಿಜಯಕುಮಾರ ಪಾಟೀಲ ರವರಿಗೆ ಸೇರಿದ್ದು ಇರುತ್ತದೆ ಎಂದರೆ ಸರಿ. ಸಸದರಿ ಬಾವಿಯು ಮೀನಾ ಪಾಟೀಲ ರವರ ಹೊಲದಲ್ಲಿ ನಾಲೆಯಿಂದ 200 ಅಡಿ ಒಳಗಡೆ ಇದೆ ಎಂದರೆ ಸರಿ.

**<u>ಮರು ವಿಚಾರಣೆ : ಇರುವುದಿಲ್ಲ.</u>**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಗ್ಪಣಕೀಕೃತಗೊಳಿಸಲಾಯಿತು)

ಓ. ಹೆ. ಕೆ. ಸರಿ ಇದೆ.

ಪ್ರ:ದ:ನ್ಯಾ.ದಂ.ಗಳು, ಔರಾ ದ್.